# 1.21 ಕ್ವಿಂಟಲ್ ಬೆಳ್ಳಿ ಗಣಪ!

■ ರವಿ ಎಸ್‌. ಬಳೂಟಗಿ

ಹುಬ್ಬಳ್ಳಿಯಲ್ಲಿ ನಡೆಯುವ ಗಣೇಶೋತ್ಸವಕ್ಕೆ ವಿಶೇಷ ಮೆರುಗು ಹಾಗೂ ಅದ್ಧೂರಿತನವಿದೆ. ಬೆಳಗಿನ ಜಾವದವರೆಗೆ ನಡೆಯುವ ವಿಸರ್ಜನಾ ಮೆರವಣಿಯಲ್ಲಿನ ಡಿ.ಜೆ. ಅಬ್ಬರ ಹಾಗೂ ಬಣ್ಣಗಳ ಬೆಳಕಿನ ಚಿತ್ತಾರ ಇರುಳನ್ನು ಹಗಲು ಮಾಡಿದಂತೆ ಭಾಸವಾಗುತ್ತದೆ. ಮುಂಬೈ ಮಹಾನಗರಿಯ ಗಣೇಶ ಚತುರ್ಥಿಯ ವೈಭವ ಇಲ್ಲಿಯೂ ಕಾಣಸಿಗುತ್ತದೆ.

'ಹುಬ್ಬಿ ಕಾ ರಾಜಾ', 'ಹುಬ್ಬಿ ಕಾ ಮಹಾರಾಜಾ', 'ಮರಾಠ ಗಲ್ಲಿ', 'ದುರ್ಗದ ಬೈಲ್', 'ಮಾರ್ಕೆಟ್ ಗಣಪ'ಗಳು ಬಹು ಅದ್ಧೂರಿತನದಿಂದ ಪ್ರತಿಷ್ಠಾಪನೆಗೊಳ್ಳುತ್ತವೆ. ಇವುಗಳ ಜೊತೆಗೆ, 300ಕ್ಕೂ ಹೆಚ್ಚು ಕಡೆ ಪ್ರತಿಷ್ಠಾಪಿಸುವ ನಾನಾ ವೇಷದ ಸಾರ್ವಜನಿಕ ಗಣೇಶ ಮೂರ್ತಿಗಳು ಗಮನ ಸೆಳೆಯುತ್ತವೆ.

ಹುಬ್ಬಳ್ಳಿಯ ವರ್ತಕರಿಗೆ ವಿಘ್ನ ನಿವಾರಕನ ಆರಾಧನೆಯು ಪ್ರತಿಷ್ಠೆಯ ವಿಷಯವಾಗಿದೆ. ಪ್ರತಿವರ್ಷವೂ ಭಿನ್ನವಾಗಿ ಉತ್ಸವ ಆಚರಿಸಬೇಕು ಎಂದು ಯೋಚಿಸುತ್ತಾರೆ. ಸರಾಫ್ ಬಜಾರಿನ ವರ್ತಕರು ಗಣೇಶ ಆಚರಣೆಯಂತೂ ಬಹು ಅದ್ದೂರಿ. 1.21 ಕ್ವಿಂಟಲ್ ತೂಕದ ಬೆಳ್ಳಿ ಮೂರ್ತಿಯನ್ನು ಅವರು ಪ್ರತಿ ವರ್ಷವೂ ಕೂರಿಸುತ್ತಿದ್ದಾರೆ. ಗಣಪನ ಚಾಮರ, ಇಲಿವಾಹನ ಹಾಗೂ ಆಸನವೆಲ್ಲವೂ ಬೆಳ್ಳಿಯವೇ. ಇವೆಲ್ಲವೂ ಸೇರಿದರೆ ಗಣೇಶನ ಒಟ್ಟು ತೂಕ 128 ಕೆ.ಜಿ. ಆಗುತ್ತದೆ.

ಸರಾಫ್ ಬಜಾರಿನ ಚಿನ್ನಾಭರಣ ವ್ಯಾಪಾರಿಗಳು 63 ವರ್ಷಗಳಿಂದ ಗಣೇಶೋತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈ ಬಾರಿಯದು 64ನೇ ವರ್ಷದ ಆಚರಣೆ. ಅನೇಕ ವರ್ಷಗಳ ಕಾಲ ವರ್ತಕರು ಮಣ್ಣಿನಲ್ಲಿ ಮಾಡಿದ ಗಣಪತಿಯನ್ನು 11 ದಿನಗಳವರೆಗೆ ಪೂಜಿಸಿ ವಿದಾಯ ಹೇಳುತ್ತಿದ್ದರು. ಎಂಟು ವರ್ಷಗಳ ಹಿಂದೆ ಮಣ್ಣಿನ ಮೂರ್ತಿಗೆ ಬದಲಾಗಿ ಬೆಳ್ಳಿಯ ಮೂರ್ತಿ ಪ್ರತಿಷ್ಠಾಪಿಸುವ ಪರಂಪರೆಯನ್ನು ಸಂಘದ ಯುವ ವ್ಯಾಪಾರಿಗಳು ಆರಂಭಿಸಿದರು.

'ಬೆಳ್ಳಿ ಮೂರ್ತಿಯನ್ನು ಮಾಡಿಸಬೇಕು ಎಂಬುದು ಸರಾಫ್ ಸಂಘದ ಹಿರಿಯರ ಬಹು ವರ್ಷಗಳ ಕನಸಾಗಿತ್ತು. ಅದನ್ನು ಈಗಿನ ಯುವಕರ ಸಂಘವು ಎಂಟು ವರ್ಷಗಳ ಹಿಂದೆ ಸಾಕಾರಗೊಳಿಸಿದೆ. ಪ್ರತಿ ವರ್ಷ ದೇಣಿಗೆ ಹಾಗೂ ಹರಕೆಯಿಂದ ಬಂದಿದ್ದ ಬೆಳ್ಳಿ ನಾಣ್ಯ, ತೊಟ್ಟಿಲು, ಗಣೇಶನ ಚಿಕ್ಕ ಚಿಕ್ಕ ಮೂರ್ತಿಗಳನ್ನು ಕರಗಿಸಿ ಈ ಬೃಹತ್ ಬೆಳ್ಳಿ ಗಣಪನನ್ನು ರೂಪಿಸಲಾಗಿದೆ' ಎನ್ನುತ್ತಾರೆ ಗಣೇಶೋತ್ಸವ ಯುವಕ ಸಂಘದ ಖಜಾಂಚಿ ಸಚಿನ್ ಮಿಸ್ಕಿನ್.



ಪ್ರತಿವರ್ಷ ಸರಾಫ್ ಬಜಾರಿನ ಘಂಟಿಕೇರಿಯ ಪೊಲೀಸ್ ಠಾಣೆ ಸಮೀಪ ಪೆಂಡಾಲ್‌ನಲ್ಲಿ ಬೆಳ್ಳಿ ಗಣೇಶಮೂರ್ತಿ ಪ್ರತಿಷ್ಠಾಪನೆಗೊಳ್ಳುತ್ತದೆ. ಈ ವರ್ಷ 'ಕೋವಿಡ್ 19' ಕಾರಣದಿಂದಾಗಿ ಗಣೇಶೋತ್ಸವ ಆಚರಣೆ ಸರಳವಾಗಿತ್ತು. ಸಂಘದ ಕಚೇರಿಯಲ್ಲಿ ಪ್ರತಿಷ್ಠಾಪನೆ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು.

ಗಣೇಶ ಚತುರ್ಥಿಯ ಮೊದಲ ದಿನ ನಗರದ ಸಾಯಿಬಾಬಾ ಮಂದಿರದಿಂದ ಅದ್ದೂರಿ ಮೆರವಣಿಗೆಯಲ್ಲಿ ಮೂರ್ತಿಯನ್ನು ಮಂಟಪಕ್ಕೆ ತರಲಾಗುತ್ತದೆ. ಕೊನೆಯ ದಿನ ಮಣ್ಣಿನ ಚಿಕ್ಕ ಗಣಪನ್ನು ಮಾತ್ರ ವಿಸರ್ಜನೆ ಮಾಡಲಾಗುತ್ತದೆ. ಉತ್ಸವದ 11 ದಿನಗಳ ಬಳಿಕ ಸಂಘದ ಭದ್ರತಾ ಕೊಠಡಿಯನ್ನು ಈ ಗಣೇಶ ಸೇರಿಕೊಳ್ಳುತ್ತಾನೆ. ಅಪರೂಪದ ಮೂರ್ತಿಯಾದ ಕಾರಣ ವಿಸರ್ಜನಾ ಮೆರವಣಿಗೆಯೂ ಸರಳವಾಗಿರುತ್ತದೆ. ಇದಿಷ್ಟು ಗಣೇಶೋತ್ಸವ ಆಚರಣೆಯ ವಾರ್ಷಿಕ ವಿಧಿ.

'ಮುಂಬೈನಲ್ಲಿ 'ಲಾಲ್ ಬಾಗ್ ಕಾ ಮಹಾರಾಜಾ' ಮೂರ್ತಿ ತಯಾರಿಸುವ ಕಲಾವಿದರು ಬೆಳ್ಳಿಯ ವಿಗ್ರಹಗಳನ್ನು ತಯಾರಿಸುತ್ತಾರೆ. ಅವರೇ ಈ ಮೂರ್ತಿಯನ್ನೂ ಮಾಡಿಕೊಟ್ಟಿದ್ದಾರೆ' ಎನ್ನುತ್ತಾರೆ ಸಚಿನ್ ಮಿಸ್ಕಿನ್.

'ಹುಬ್ಬಳ್ಳಿಯಲ್ಲಿಯೇ ನಮ್ಮದು ವಿಶೇಷ ಗಣೇಶ ಎಂಬ ಹೆಮ್ಮೆ ನಮಗಿದೆ. ಸಂಘ, ಸಂಸ್ಥೆಗಳು ಆಯೋಜಿಸುವ ಸ್ಪರ್ಧೆಯಲ್ಲಿ ಬಹುಮಾನಗಳು ಬಂದಿವೆ. ಉತ್ಸವದ ಜತೆಗೆ ಮನರಂಜನಾ ಕಾರ್ಯಕ್ರಮಗಳೂ ನಡೆಯುತ್ತವೆ. ಈ ಬಾರಿ ಮಾತ್ರ ಸರಳ ಆಚರಣೆಗೆ ಒತ್ತು ಕೊಟ್ಟಿದ್ದೇವೆ' ಎಂಬುದು ಸಂಘದ ಕಾರ್ಯದರ್ಶಿ ಸಿದ್ಧರಾಮ ಮೆಹರವಾಡೆ ಅವರ ಮಾತು. ■